# ಪರೀಕ್ಷಾಕಾಲದಲ್ಲಿ ಮೇಘಶ್ರೀ



**ಕಿರುತೆರೆ ಮತ್ತು ಹಿರಿತೆರೆ ಎರಡರಲ್ಲಿಯೂ ಮಿಂಚುತ್ತಿರುವ ನಟಿ ಮೇಘಶ್ರೀ ಸದ್ಯಕ್ಕೆ ಭೋಜಪುರಿ ಚಿತ್ರದ ಚಿತ್ರೀಕರಣದಲ್ಲಿದ್ದಾರೆ.**

■ **ಪದ್ಮನಾಭ ಭಟ್**

'ಮಾರ್ಚ್ 22', 'ಕೃಷ್ಣ ತುಳಸಿ', 'ದಶರಥ' ಹೀಗೆ ಹಲವು ಸಿನಿಮಾಗಳಲ್ಲಿ ಗಮನಸೆಳೆದಿದ್ದ ಕಿರಿಯ ನಟಿ ಮೇಘಶ್ರೀ. 'ಕಿರಿಯ' ಎನ್ನುವ ಪದ ಇವರ ವಯಸ್ಸಿಗೆ ಅನ್ವಯಿಸಿ ಹೇಳಬಹುದೇ ಹೊರತು ಪ್ರತಿಭೆಗಲ್ಲ.

ಮೇಘಶ್ರೀ ಸಿನಿಮಾ ಲೋಕಕ್ಕೆ ಅಡಿಯಿಟ್ಟಿದ್ದು ಹತ್ತನೇ ತರಗತಿ ಓದುತ್ತಿದ್ದಾಗ, ಅದೂ ತೆಲುಗು ಸಿನಿಮಾ ಮೂಲಕ. ತೆಲುಗಿನಲ್ಲಿ ನಾಲ್ಕು ಸಿನಿಮಾಗಳಲ್ಲಿ ನಟಿಸಿದ ಮೇಲೆಯೇ ಅವರು ಚಂದನವನದ ಸಿನಿಕರ್ತರ ಕಣ್ಣಿಗೆ ಬಿದ್ದಿದ್ದು.

ಇತ್ತೀಚೆಗಷ್ಟೆ ಬಿ.ಎ. ಪದವಿ ಅಂತಿಮ ವರ್ಷದ ಪರೀಕ್ಷೆ ಮುಗಿಸಿರುವ ಮೇಘಶ್ರೀ ಫಲಿತಾಂಶಕ್ಕಾಗಿ ಕಾಯುತ್ತಿದ್ದಾರೆ. ಮುಂದೆ ಎಂ.ಬಿ.ಎ. ಮಾಡಬೇಕು ಎಂಬ ಹೆಬ್ಬಯಕೆಯೂ ಅವರಿಗಿದೆ. ಬರೀ ಶಿಕ್ಷಣದಲ್ಲಿಯಷ್ಟೇ ಅಲ್ಲ, ವೃತ್ತಿಜೀವನದಲ್ಲಿಯೂ ಅವರು ಒಂದು ಹಂತದ ಪರೀಕ್ಷೆ ಬರೆದು ಫಲಿತಾಂಶಕ್ಕಾಗಿ ಎದುರು ನೋಡುತ್ತಿದ್ದಾರೆ. ಇನ್ನೂ ಉನ್ನತಿಗೆ ಏರಬೇಕು ಎಂಬ ಮಹತ್ವಾಕಾಂಕ್ಷೆಯಂತೂ ಅವರಿಗೆ ಇದ್ದೇ ಇದೆ. ಹಾಗಾಗಿ ಮೇಘಶ್ರೀ ಪಾಲಿಗಿದು ಪರೀಕ್ಷಾಕಾಲ!

ಕೊರೊನಾ ಏಕಾಂತ ಮುಗಿಸಿದ ಚಿತ್ರ ಮೈಕೊಡವಿಕೊಳ್ಳುತ್ತಿರುವ ಹಾಗೆಯೇ ಮೇಘಶ್ರೀ ಉತ್ತರಪ್ರದೇಶಕ್ಕೆ ಹಾರಿದ್ದಾರೆ. ಅಲ್ಲಿನ ಗೋರಖ್‌ಪುರದಲ್ಲಿ 'ಅಪರಾಧಿ' ಎಂಬ ಭೋಜಪುರಿ ಸಿನಿಮಾ ಚಿತ್ರೀಕರಣದಲ್ಲಿ ತೊಡಗಿಕೊಂಡಿದ್ದಾರೆ.

"ಇದು ಭೋಜಪುರಿ ಭಾಷೆಯಲ್ಲಿ ನನ್ನ ಎರಡನೇ ಸಿನಿಮಾ. ಈ ಹಿಂದೆ 'ರೈಟ್' ಎಂಬ ಒಂದು ಸಿನಿಮಾ ಮಾಡಿದ್ದೆ. ಅದು ಚಿತ್ರೀಕರಣ ಮುಗಿದು, ಬಿಡುಗಡೆಗೆ ಸಿದ್ಧವಾಗಿದೆ. ಈಗ 'ಅಪರಾಧಿ' ಎಂಬ ಸಿನಿಮಾ ಮಾಡುತ್ತಿದ್ದೇನೆ. ಭೋಜಪುರಿಯ ಖ್ಯಾತ ನಿರ್ದೇಶಕ ಶೇಖರ್ ಶರ್ಮಾ ಈ ಚಿತ್ರದ ನಿರ್ದೇಶಕರು. ಇದರಲ್ಲಿ ನಾನು ಶಾಲಾ ಶಿಕ್ಷಕಿಯ ಪಾತ್ರದಲ್ಲಿ ನಟಿಸುತ್ತಿದ್ದೇನೆ" ಎನ್ನುವ ಅವರಿಗೆ ಅಲ್ಲಿನ ಜನರ ಸಿನಿಮಾ ಪ್ರೀತಿ ಕಂಡು ವಿಸ್ಮಯವಾಗಿದೆ. 'ಇಲ್ಲಿ ಜನರಿಗೆ ಸಿನಿಮಾ ಎಂದರೆ ಒಂದು ರೀತಿಯ ಹುಚ್ಚು. ಚಿತ್ರೀಕರಣ ನಡೆಯುತ್ತಿದ್ದರೆ ಜನ ಕಿಕ್ಕಿರಿದು ಸೇರುತ್ತಾರೆ' ಎಂದು ಬೆರಗಿನಿಂದಲೇ ಹೇಳುತ್ತಾರೆ.

ಇತ್ತ ಕನ್ನಡದಲ್ಲಿಯೂ ಮೇಘಶ್ರೀ ಅವರು ಒಪ್ಪಿಕೊಂಡಿರುವ, ಬಿಡುಗಡೆಗೆ ಸಜ್ಜಾಗಿರುವ ಸಾಲು ಸಾಲು ಸಿನಿಮಾಗಳಿವೆ. ಚಿರಂಜೀವಿ ಸರ್ಜಾ ಅವರ ಜೊತೆ ನಟಿಸಿದ 'ರಾಜ ಮಾರ್ತಾಂಡ' ಸಿನಿಮಾದ ಬಗ್ಗೆ ಮೇಘಶ್ರೀಗೆ ನಿರೀಕ್ಷೆಗಳಿವೆ. ಹಾಗೆಯೇ ಇನ್ನೂ ಒಂದಿಷ್ಟು ಚಿತ್ರೀಕರಣ ಬಾಕಿ ಇರುವ 'ವಾರ್ಡ್ ನಂ.11'ನಲ್ಲಿಯೂ ಮೇಘಶ್ರೀ ನಟಿಸಿದ್ದಾರೆ. 'ಅದೊಂದು ಪೊಲಿಟಿಕಲ್ ಸಿನಿಮಾ. ನಾನು ಮಧ್ಯಮವರ್ಗದ ಹುಡುಗಿಯ ಪಾತ್ರದಲ್ಲಿ ನಟಿಸಿದ್ದೇನೆ' ಎನ್ನುವ ಅವರು ಶ್ರೀನಿವಾಸ ಶಿಡ್ಲಘಟ್ಟ ನಿರ್ದೇಶನದ 'ಮನಸಾಗಿದೆ' ಸಿನಿಮಾದ ಚಿತ್ರೀಕರಣವನ್ನೂ ಮುಗಿಸಿದ್ದಾರೆ.

'ನಾನು ಮೊದಲಿನಿಂದಲೂ ಬಂದ ಅವಕಾಶಗಳನ್ನೆಲ್ಲ ಒಪ್ಪಿಕೊಂಡಿಲ್ಲ. ನನಗೆ ಹೊಂದುವ, ಒಳ್ಳೆಯ ನಿರ್ದೇಶಕ, ತಂಡ, ಕಥೆ ಇರುವ ಸಿನಿಮಾಗಳಲ್ಲಿ ಮಾತ್ರವೇ ನಟಿಸುತ್ತ ಬಂದಿದ್ದೇನೆ' ಎನ್ನುವ ಮೇಘಶ್ರೀ ಗ್ಲ್ಯಾಮರ್ ವಿಷಯದಲ್ಲಿ ತಮಗೆ ತಾವೇ ಒಂದು ಗಡಿರೇಖೆಯನ್ನೂ ಹಾಕಿಕೊಂಡಿದ್ದಾರೆ. 'ಕಥೆ ಕೇಳುವಾಗಲೇ ಅದು ಎಂಥ ಪಾತ್ರ ಎಂದು ನಮಗೆ ಗೊತ್ತಾಗಿಬಿಡುತ್ತದೆ. ನನಗೆ ಒಪ್ಪಿಗೆಯಾಗದ ಪಾತ್ರಗಳನ್ನು ಆ ಹಂತದಲ್ಲಿಯೇ ನಾನು ತಿರಸ್ಕರಿಸುತ್ತೇನೆ' ಎನ್ನುವುದು ಅವರ ಅಂಬೋಣ.

ಅವರು ಕನ್ನಡದ ಇನ್ನೋರ್ವ ಖ್ಯಾತ ನಟಿಯೊಟ್ಟಿಗೆ ನಟಿಸಲಿರುವ ಮಹಿಳಾಪ್ರಧಾನ ಸಿನಿಮಾವೊಂದು ಅಕ್ಟೋಬರ್‌ನಲ್ಲಿ ಸೆಟ್ಟೇರಲಿದೆ. ಆ ಸಿನಿಮಾ ತುಂಬ ವಿಶೇಷವಾದದ್ದು, ಅಷ್ಟೇ ಸವಾಲಿನದ್ದೂ ಹೌದು ಎನ್ನುವ ಅವರು ಅದರ ಬಗ್ಗೆ ಹೆಚ್ಚಿನ ಮಾಹಿತಿ ಬಿಟ್ಟುಕೊಡುವುದಿಲ್ಲ.

ಕನ್ನಡವಷ್ಟೇ ಅಲ್ಲದೆ, ತೆಲುಗು, ತಮಿಳು, ಭೋಜಪುರಿಗಳಲ್ಲಿಯೂ ಅವರಿಗೆ ಸಾಕಷ್ಟು ಅವಕಾಶಗಳು ಬರುತ್ತಿವೆ. ಅವುಗಳಲ್ಲಿ ಗಮನಾರ್ಹವಾದ ಅವಕಾಶಗಳಲ್ಲಿ ನಟಿಸುತ್ತಲೇ ಉನ್ನತ ಶಿಕ್ಷಣವನ್ನೂ ಮುಗಿಸುವ ಯೋಜನೆಯನ್ನು ಮೇಘಶ್ರೀ ಹಾಕಿಕೊಂಡಿದ್ದಾರೆ. ■

